ಪ್ರಬಂಧ

ಎಲೆಕ್ಟ್ರಾನಿಕ್ ಗಡಿಯಾರಗಳು ಬಂದವು. ಇಪ್ಪತ್ತೈದು ರೂಪಾಯಿಯಿಂದ ಕೋಟಿ ಬೆಲೆ ಬಾಳುವ ಗಡಿಯಾರವೋ ಕೈಗಡಿಯಾರವೋ ಬಂದಾಯಿತು. ಈ ಬದಲಾವಣೆಯೇನೇ ಇದ್ದರೂ, ಮಾನವನ ಅಮೂಲ್ಯ ಜೀವಕ್ಕೂ, ಬರಿದೆ ಒಂದು ಯಂತ್ರವಾದ ಗಡಿಯಾರಕ್ಕೂ ಹೋಲಿಕೆ ಯಾಕೆ ಮಾಡುತ್ತಾರೆ ಎಂದು ನಾನು ತಲೆ ಕೆರೆದುಕೊಂಡಿದ್ದೇನೆ. ನಿರಂತರವಾಗಿ ನಡೆಯಬೇಕಾದ ಹೃದಯ ಮತ್ತು ಗಡಿಯಾರ ಎರಡೂ ದೋಷಪೂರ್ಣವಾಗಿ ನಿಂತರೆ, ಅದರದರ ಆಯುಷ್ಯ ಮುಗಿಯಿತು ಎಂದರ್ಥವೆ? ಮನುಷ್ಯನ ಜೀವ ಅವನ ಹೃದಯ ಬಡಿಯುತ್ತಿರುವ ತನಕ ಇರುತ್ತದೆ. ಹಾಗೆಯೇ ಗಡಿಯಾರ ಟಿಕ್ ಟಿಕ್ ಅನ್ನುವ ತನಕ ಉಪಯುಕ್ತ ಅನ್ನುವ ಅರ್ಥ ಇಲ್ಲಿದೆಯೆ? ಗಡಿಯಾರಕ್ಕೆ ಶೆಲ್ ತೀರಿಹೋದರೆ ಹೊಸತು ಹಾಕಿದರೆ ಟಿಕ್‌ಟಿಕ್ ಅಂದೀತು. ಈಗಿನ ಕಾಲದಲ್ಲಿ ಮನುಷ್ಯನ ಟಿಕ್ ಟಿಕ್ ಹೃದಯ ಹಾಳಾದರೆ, ನಿಂತರೆ, ಸ್ಲೋ ಆದರೆ ಸ್ಟಂಟ್ ಹಾಕುವುದೋ, ವಾಲ್ವ್ ಬದಲಿಸುವುದೋ, ತೆರೆದ ಹೃದಯ ಚಿಕಿತ್ಸೆಯೋ, ಬದಲಿ ಹೃದಯ ಜೋಡಣೆಯೋ ಮಾಡುತ್ತಾರೆ; ಹಿಂದೆ ಅದೆಲ್ಲ ಕಷ್ಟವಾಗಿತ್ತು ಅಥವಾ ಅದರ ಸಾಧ್ಯತೆಯೇ ಇರಲಿಲ್ಲ. ಗಡಿಯಾರದ ಹಣೆಬರಹವೂ ಅಷ್ಟೇ ಆಗಿತ್ತು. ಬಹುಹಿಂದಿನ ಕಾಲದಲ್ಲಿ, ಪ್ರಿ–ಎಲೆಕ್ಟ್ರಾನಿಕ್ ಯುಗದಲ್ಲಿ, ಗಡಿಯಾರ ನಿಂತಿದೆ ಅಂತಾದರೆ ಕೀ ಕೊಟ್ಟರಾಗಿತ್ತಷ್ಟೆ; ಆಮೇಲೆ ಶೆಲ್ ಬದಲಿಸಿದ್ದರಾಗಿತ್ತಷ್ಟೆ. ಸಮಯಕ್ಕೆ ಸರಿಯಾಗಿ ಆ ಕೆಲಸ ಮಾಡುತ್ತಿದ್ದರೆ ಸಮಸ್ಯೆಗಳೇ ಇರುತ್ತಿರಲಿಲ್ಲ. ಆಗಿನ ಗಡಿಯಾರಗಳು ಗಟ್ಟಿ. ಈಗ ಹಾಗಿಲ್ಲ. ಹಾಳಾಯಿತೆಂದರೆ ಒಗೆಯುವುದೇ. ಯೂಸ್ ಅಂಡ್ ಥ್ರೋ. ಹೃದಯ ಹೊತ್ತ ಮನುಷ್ಯರನ್ನ ಹಾಗೆ ಮಾಡಲಿಕ್ಕೆ ಬರುವುದಿಲ್ಲವಲ್ಲ? ಹೃದಯದ ರಿಪೇರಿ ಅಂಗಡಿಗಳು ಈಗ ಸಾಕಷ್ಟಿವೆ. ಹಿಂದೆ ಹಾಗಿರಲಿಲ್ಲ ಮತ್ತು ಹೃದ್ರೋಗಿಗಳ ಸಂಖ್ಯೆಯೂ ಹೆಚ್ಚು ಇದ್ದಂತಿರಲಿಲ್ಲ.



ಮತ್ತೆ ಸ್ವಲ್ಪ ವಿಷಯಾಂತರವಾಯಿತು. ಜೀವಕ್ಕೂ ಸಮಯಕ್ಕೂ/ಗಡಿಯಾರಕ್ಕೂ ಯಾಕೆ ಹೋಲಿಸುತ್ತಾರೆ ಎಂದಲ್ಲವೆ ಆರಂಭಿಸಿದ್ದು? ನೆನಪಾಗುವ ಒಂದೆರಡು ಕಥೆಗಳಿಂದ ಇದು ಸ್ಪಷ್ಟವಾಗಬಹುದು. ಹೂವನ್ನು ಕೋಮಲತ್ವಕ್ಕೆ, ಹೆಣ್ಣನ್ನು ಚಂಚಲತೆಗೆ, ಗಂಡನ್ನು ದುಂಬಿಗೆ ರೂಪಕವಾಗಿ ಬಳಸುವ ಸಾಹಿತಿಗಳು ಗಡಿಯಾರವನ್ನು ಜೀವಕ್ಕೆ ಪ್ರತಿಮೆಯಾಗಿಯೋ ಸಂಕೇತವಾಗಿಯೋ ಬಳಸಿದ್ದನ್ನು ನೋಡೋಣ. ಒಬ್ಬ ಪ್ರಸಿದ್ಧ ಲೇಖಕನ ಕಥೆಯಲ್ಲಿ ಒಬ್ಬ ರೋಗಿ ಗಡಿಯಾರವನ್ನೇ ನೋಡುತ್ತ, ತನ್ನ ಗತ ಬದುಕಿನ ಕಥೆಯನ್ನೆಲ್ಲ ನೆನಪು ಮಾಡಿಕೊಳ್ಳುತ್ತ ಮಲಗಿಕೊಂಡಿದ್ದಾನೆ. ಗಡಿಯಾರದ ಸದ್ದು, ತನ್ನ ಹೃದಯದ ಸದ್ದು ಒಂದೇ ಅಂತ ಆತನಿಗೆ ಅನ್ನಿಸುತ್ತೆ. ಕಡೆಗೆ ಗಡಿಯಾರ ನಿಂತುಹೋಗುತ್ತದೆ. ಅಲ್ಲಿಗೆ ಕಥೆ ಮುಗಿಯುತ್ತದೆ.

ಮತ್ತೊಂದು ಪ್ರಸಿದ್ಧ ತಮಿಳು ಕಥೆಯಲ್ಲಿ ಒಬ್ಬಾತನ ಮನೆಯಲ್ಲಿ ಬಾಗಿಲ ಚೌಕಟ್ಟಿಗಿಂತ ಎತ್ತರದಲ್ಲಿ ಒಂದು ಹಳೆಯ ಪೆಂಡುಲಂ ಗಡಿಯಾರ ನೇತು ಹಾಕಲಾಗಿರುತ್ತದೆ. ಅದು ಕೀ ಕೊಟ್ಟ ಬಳಿಕ ಸ್ವಲ್ಪವೂ ಓರೆಕೋರೆಯಾಗದಂತೆ ಸರಿಯಾದ ಸ್ಥಾನದಲ್ಲಿದ್ದರೆ ಮಾತ್ರ ನಡೆಯುವ ಗಡಿಯಾರ. ನಾಯಕ ಕಷ್ಟಪಟ್ಟು ಕೀ ಕೊಟ್ಟು ಸರಿಯಾದ ಸ್ಥಾನದಲ್ಲಿ ಅದನ್ನ ನೇತುಹಾಕಿ, ಅಂತೂ ಸರಿಯಾಗಿ ನಡೆಯುತ್ತಿದೆ ಎಂದು ನಿರ್ಧರಿಸಿ, ತಾನು ಹತ್ತಿ ನಿಂತಿದ್ದ ಎತ್ತರದ ಮಣೆ/ಸ್ಟೂಲಿಂದ ಕೆಳಕ್ಕಿಳಿಯುತ್ತಾನೆ. ಗಡಿಯಾರವನ್ನು ಯಾರೂ ಅಲುಗಾಡಿಸದಿದ್ದರೆ ಇನ್ನದು ಒಂದು ವಾರ ಸರಿಯಾಗಿ ನಡೆಯುತ್ತದೆ ಎಂದುಕೊಳ್ಳುತ್ತಾನೆ. ‘ಆದರೆ ಅದು ನಡೆಯುವ ಹಾಗಿಲ್ಲ. ಅವನ ಎದೆ ನೋಯತೊಡಗಿತು’ ಅಂತ ಕಥೆ ಮುಕ್ತಾಯವಾಗುತ್ತದೆ.

ಇನ್ನೊಂದು ಓ ಹೆನ್ರಿ ಬರೆದ ಪ್ರಸಿದ್ಧ ಕಥೆ. ‘ಒಂದು ಮನೆ; ಆ ಮನೆಯಲ್ಲಿ ರೋಗದಿಂದ ನರಳುತ್ತಿರುವ ಒಬ್ಬ ಹೆಣ್ಣು– ದುರದೃಷ್ಟವಂತೆ. ಆದರೋಪಚಾರ ಮಾಡುವವರು, ಹತ್ತಿರದವರು